ಕಂಡು ನನಗೇನೂ ಆಶ್ಚರ್ಯವಾಗಲಿಲ್ಲ. ಯಾಕೆಂದರೆ ಅವನು ಯಾವಾಗಲೂ ಹೀಗೆಯೇ. ಸಾಂತಾಕ್ಲಾಸ್‌ನಂತೆ ಹೇಳದೆ, ಕೇಳದೆ ಬಂದುಬಿಟ್ಟಿರುತ್ತಿದ್ದನಲ್ಲ! ನನಗೆ ಆಶ್ಚರ್ಯವಾಗಿದ್ದು ಯಾವಾಗೆಂದರೆ ರಜೆ ಮುಗಿದ ಮೇಲೆ ಆತ ತಿರುಗಿಹೋಗದಿದ್ದಾಗ. ಅವ್ವ ಆವತ್ತಂತೂ ತುಂಬ ಖುಷಿಯಲ್ಲಿದ್ದಳು: "ಮಗನೆ, ನಾವು ಸಲ್ಲಿಸಿದ ಪ್ರಾರ್ಥನೆಯನ್ನ ದೇವರು ಕೇಳಿಸಿಕೊಂಡ. ಅವರು ಮಿಲಿಟರಿಯಿಂದ ನಿವೃತ್ತಿ ಆಗ್ಯಾರ. ನಾವಿನ್ನು ಆರಾಮವಾಗಿ ಇರಬಹುದು." ಅವ್ವ ಸುಖ–ಸಂತೋಷ ಎನ್ನುತ್ತಿದ್ದಾಳೆ. ಆದರೆ ಆ ವಿಷಯ ಕೇಳಿ ನನಗಂತೂ ತುಂಬ ಬೇಸರವಾಯಿತು. ಅಪ್ಪ ಮನೆಗೆ ಬಂದಿದ್ದು ನನಗಂತೂ ತುಂಬ ವ್ಯತಿರಿಕ್ತ ಪರಿಣಾಮ ಬೀರತೊಡಗಿತು. ಆತ ಅವ್ವನೊಡನೆ ಸದಾ ಕಾಲ ಮಾತನಾಡುತ್ತ ಕುಳಿತರೆ ಪಾಪ ಅವಳು ನನ್ನೊಂದಿಗೆ ಯಾವಾಗ ಮಾತಾಡುವುದು? ನನಗೂ ತಡೆದು ತಡೆದು ಸಾಕಾಯಿತು.

''ಅವ್ವ!'' ನಾನು ಅವರ ಮಾತುಗಳಿಗೆ ಅಡ್ಡಿಪಡಿಸಿದೆ. ನನಗೆ ಕೋಪ ಬಂದಿದ್ದು ಅವ್ವನಿಗೆ ಗೊತ್ತಾಗಿರಬೇಕು.

"ಪುಟ್ಟಾ! ಒಂದ್ ನಿಮಿಷ!" ಅವ್ವ ಹಾಗೆ ಹೇಳಿ ಕಣ್ಣಿನಲ್ಲಿಯೇ ನನಗೆ ಸಮಾಧಾನ ಹೇಳಿದಳು.

''ಅವ್ವ! ಕೇಳಿಲ್ಲಿ!...'' ಈ ಸಲ ನಾನು ಮತ್ತಷ್ಟು ಜೋರಾಗಿ ಚೀರಿದೆ.

"ಏಯ್ ಪುಟ್ಟಾ!, ಹಂಗ್ಯಾಕ ಚೀರಲಿಕ್ಕೆ ಹತ್ತೀದಿ? ನಿಮ್ಮ ಪಪ್ಪ ಮತ್ತು ನಾನು ಮಾತಾಡ್ತಾ ಇರೋದು ನಿನಗ ಕಾಣವಲ್ದೇನು? ಹೊರಗ ನಡಿ. ಆಟ ಆಡಹೋಗು."

''ಅವ್ವ, ನನಗೂ ನಿನ್ನ ಜೋಡಿ ಮಾತಾಡಬೇಕಾಗೇದ.''

"ಅಲ್ಲೋ ಪುಟ್ಟ, ನೋಡು, ನಿಮ್ಮ ಡ್ಯಾಡಿ ಮತ್ತು ನಾನು ಅಗದೀ ಅರ್ಜಂಟ್ ವ್ಯವಹಾರದ ಬಗ್ಗೆ ಮಾತುಕತೆ ನಡೆಸೇವಿ. ನಿನಗ ಅಷ್ಟೂ ತಿಳಿಯೋದಿಲ್ಲೇನು? ನಮಗ ತೊಂದರಿ ಕೊಡಲಾರದಂಗ ನಿನ್ನಷ್ಟಕ್ಕ ನೀನು ಅಂಗಳದಾಗ ಆಡಿಕೊಳ್ಳಬೇಕೇನಪಾ... ಇನ್ನೊಮ್ಮೆ ಬಂದು ಹೀಂಗ ನಮ್ಮ ಮಾತಿಗೆ ಅಡ್ಡಿಪಡಿಸಿದೀಯಂದ್ರ ನಿನ್ನ ಕಪಾಳಕ್ಕ ನಾಲ್ಕು ಬಾರಿಸತೇನಿ, ನೋಡು." ಓಹ್! ಅಪ್ಪ ಬಂದ ಮೇಲೆ ಅವ್ವ ಎಷ್ಟೊಂದು ಕೆಟ್ಟವಳಾಗಿದ್ದಾಳೆ!

ಅಂದು ಮಧ್ಯಾಹ್ನ ನನ್ನನ್ನು ಸಮಾಧಾನಪಡಿಸಲೋ ಎಂಬಂತೆ ಇರಬೇಕು. ಅವ್ವ ಅಪ್ಪನಿಗೆ ಹೇಳಿ ಮಗನನ್ನು ಹೊರಗೆ ಕರೆದೊಯ್ಯುವಂತೆ ಹೇಳಿದಳು. ನನಗೆ ಮತ್ತೂ ಬೇಜಾರಾಯಿತು. ಯಾಕೆಂದರೆ ಪೇಟೆಯಲ್ಲಿ ಹೇಗೆ ಸುತ್ತಾಡಬೇಕು ಎನ್ನುವುದರ ಬಗ್ಗೆ ನನ್ನ ಮತ್ತು ಅಪ್ಪನ ನಡುವೆ ಮೂಲಭೂತ ವ್ಯತ್ಯಾಸಗಳಿದ್ದವು. ಅವನೊಂದಿಗೆ ನಾನು ಯಾಕಾದರೂ ಬಂದೆನೆಂದು ಪಶ್ಚಾತ್ತಾಪವಾಗತೊಡಗಿತು. ಆಟಿಗೆಯ ಸಾಮಾನುಗಳ ಅಂಗಡಿ, ಹೋಟೆಲು, ಪಾರ್ಕ್ ಮುಂತಾದವುಗಳಲ್ಲಿ ನನಗೆ ಆಸಕ್ತಿ ಇದ್ದರೆ ಅಪ್ಪನ ಆಸಕ್ತಿಯೇ ಬೇರೆ. ತನ್ನಷ್ಟೆ ವಯಸ್ಸಾದ ವ್ಯಕ್ತಿಗಳೊಂದಿಗೆ ಆತ ಗಂಟೆಗಟ್ಟಲೆ ಮಾತಾಡುತ್ತ ನಿಂತುಬಿಡುತ್ತಿದ್ದ. ಬಹಳ ದಿನಗಳಾದ ಮೇಲೆ ಅವನ ಸ್ನೇಹಿತರು ಸಿಗುತ್ತಿದ್ದರು. ಅವನ ಮಾತುಗಳು ಸಿಕ್ಕರೆ ಹುಗ್ಗಿ ಉಂಡಷ್ಟೆ ಅವರು ಸಂತೃಪ್ತರಂತೆ ನಿಂತುಬಿಡುತ್ತಿದ್ದರು. ಅಪ್ಪನ ಮತ್ತೊಂದು ಚಾಳಿಯೆಂದರೆ ತಾನು ಹೋದತ್ತಲೆ ನನ್ನನ್ನೂ ಬರಬರ ಎಂದು ಕೈಬೆರಳು ಹಿಡಿದು ಎಳೆದೊಯ್ಯುತ್ತಿದ್ದ. ಮಕ್ಕಳು ಎಷ್ಟೇ ಗೋಣಗಾಟ ನಡೆಸಿದರೂ ಅದರ ಬಗ್ಗೆ ಲಕ್ಷ್ಯ ವಹಿಸದಿರಲು ಆತ ಜೀವನದಲ್ಲಿ ನಿರ್ಧರಿಸಿದಂತಿತ್ತು. ನಾನು ಎಷ್ಟೆ ಹಟ ಮಾಡಿದರೂ ಆತ ಕಿವಿಯಲ್ಲಿ ಹಾಕಿಕೊಳ್ಳಲಿಲ್ಲ. ನಾನು ಅತ್ತರೂ ಅವನ ಮನ ಕರಗಲಿಲ್ಲ. ಅಪ್ಪನ ಜೊತೆ ತಿರುಗಾಡುವುದು ಒಂದೇ, ಯಾವುದೇ ಸಂವೇದನೆಯಿಲ್ಲದ ಬಂಡೆಗಲ್ಲಿನೊಂದಿಗೆ ತಿರುಗಾಡುವುದು ಒಂದೇ ಅನಿಸಿತು. ಮನೆಗೆ ಮರಳುವುದೆ ಉತ್ತಮ ಅನಿಸಿ ಅವನನ್ನು ಪುಸಲಾಯಿಸಿಕೊಂಡು ಹಿಂತಿರುಗಿದೆ.

ಅಂದು ರಾತ್ರಿ ನಾನು ಮಲಗಲು ಹಟ ಮಾಡುತ್ತಿದ್ದೆ. ಅವ್ವ ನನ್ನನ್ನು ತಟ್ಟಿ ಮಲಗಿಸಲು